ಕಾಡುಗಳ್ಳ ವೀರಪ್ಪನ್ ಹಿಡಿಯಲು ಗಡಿ ಭದ್ರತಾ ಪಡೆಗೆ ನೀಡಿರುವ ಹಣ

೪೧೩. (೭೦೩) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಕಾಡುಗಳ್ಳ ವೀರಪ್ಪನ್ ಹಿಡಿಯಲು ಗಡಿ ಭದ್ರತಾ ಪಡೆಯ ನೆರವನ್ನು ಯಾವಾಗ ಪಡೆಯಲಾಯಿತು ?

ಆ) ಇಲ್ಲಿಯವರೆಗೆ ಈ ಗಡಿ ಭದ್ರತಾ ಪಡೆಯ ಎಷ್ಟು ಜನರು ಈ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ ?

ಇ) ಈ ಗಡಿ ಭದ್ರತಾಪಡೆಯ ಸಿಬ್ಬಂದಿಗಳಿಗೆ ರಾಜ್ಯ ಸರ್ಕಾರ ವೆಚ್ಚ ಮಾಡಿದ ಹಣ ಎಷ್ಟು ?

ಈ) ಇತ್ತೀಚೆಗೆ ಗಡಿ ಭದ್ರತಾಪಡೆಯ ಎರಡು ಕಂಪನಿಗಳನ್ನು ವಾಪಸ್ಸು ಕಳುಹಿಸಿರುವುದು ನಿಜವೇ ?

ಉ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಊ) ಇದರಿಂದ ವೀರಪ್ಪನ್‌ನನ್ನು ಹಿಡಿಯುವ ಕೆಲಸಕ್ಕೆ ಅಡಚಣೆಯುಂಟಾಗುವುದಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು).—

ಅ) ವೀರಪ್ಪನ್ ಬಂಧನಕ್ಕಾಗಿ ನೇಮಕ ಮಾಡಲಾಗಿರುವ ವಿಶೇಷ ಕಾರ್ಯಾಚರಣೆ ಪಡೆಗೆ ನೆರವಾಗಲು ಗಡಿಭದ್ರತಾ ಪಡೆಯನ್ನು ದಿನಾಂಕ ೫-೬-೧೯೯೩ ರಿಂದ ಕರೆಸಲಾಗಿದೆ.

ಆ) ದಿನಾಂಕ ೫-೬-೯೩ ರಿಂದ ೯-೩-೯೪ರ ವರೆಗೆ ಗಡಿಭದ್ರತಾ ಪಡೆಯ ೫೦೦ ಮಂದಿ (೫ ಕಂಪನಿಗಳು) ಕಾರ್ಯಾಚರಣೆಯಲ್ಲಿ ತೊಡಗಿದ್ದು, ದಿನಾಂಕ ೯-೩-೯೪ರಂದು ಭದ್ರತಾಪಡೆಯ ಮೂರು ಕಂಪನಿಗಳನ್ನು ಕೇಂದ್ರಕ್ಕೆ ವಾಪಸ್ ಕಳುಹಿಸಿದ್ದರಿಂದ ದಿನಾಂಕ ೯-೩-೯೪ ರಿಂದ ಎರಡು ಕಂಪನಿಗಳು ಮಾತ್ರ ಕಾರ್ಯನಿರ್ವಹಿಸುತ್ತವೆ.

ಇ) ಕರ್ನಾಟಕ ಸರ್ಕಾರ ದಿನಾಂಕ ೯-೩-೧೯೯೪ರವರೆಗೆ ಒಟ್ಟು ರೂ. ೯೪,೫೯,೦೦೦-೦೦ ಗಳನ್ನು ಭಾರತ ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿದೆ.

ಈ) ದಿನಾಂಕ ೯-೩-೯೪ರಂದು ಗಡಿಭದ್ರತಾ ಪಡೆಯ ಮೂರು ಕಂಪನಿಗಳನ್ನು ವಾಪಸ್ಸು ಕಳುಹಿಸಲಾಗಿದೆ.

ಉ) ಗಡಿಭದ್ರತಾ ಪಡೆಯ ಹೆಚ್ಚಿನ ಸಿಬ್ಬಂದಿಯ ಅವಶ್ಯಕತೆ ಪ್ರಸ್ತುತ ಇಲ್ಲದಿರುವುದು ಹಾಗೂ ಕೇಂದ್ರ ಸರ್ಕಾರದ ಕೋರಿಕೆಯು ಸಹ ಈ ಕಾರಣಗಳಲ್ಲಿ ಸೇರಿವೆ.

ಊ) ವಿಶೇಷ ಟಾಸ್ಕ್‌ಫೋರ್ಸ್‌ನಲ್ಲಿ ಪ್ರಸ್ತುತ ಇರುವ ಸಿಬ್ಬಂದಿಯ ಬಲ ಕಾರ್ಯಾಚರಣೆ ನಡೆಸಲು ಸಾಕಾಗುವುದರ ಜೊತೆಗೆ ತಮಿಳುನಾಡು ಪಡೆಯೊಂದಿಗೆ ಸಂಯುಕ್ತವಾಗಿ ಕಾರ್ಯಾಚರಣೆ ನಡೆಸುವುದರಿಂದ ವೀರಪ್ಪನ್ ಹಿಡಿಯುವ ಕೆಲಸಕ್ಕೆ ಯಾವ ರೀತಿಯ ಅಡಚಣೆ ಉಂಟಾಗುವುದಿಲ್ಲ.

ನೈರುತ್ಯ ರೈಲ್ವೆ ವಲಯ ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮ

೪೧೪. (೭೦೨) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ನೈರುತ್ಯ ವಲಯವನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಕೇಂದ್ರವನ್ನು ಒತ್ತಾಯಿಸಿದೆಯೇ ?

ಆ) ಹಾಗಿದ್ದಲ್ಲಿ, ಈ ನೈರುತ್ಯ ವಲಯವನ್ನು ಎಲ್ಲಿ ಸ್ಥಾಪಿಸಬೇಕೆಂದು ರಾಜ್ಯ ಸರ್ಕಾರ ಕೇಂದ್ರವನ್ನು ಕೋರಿದೆ ?

ಇ) ಹುಬ್ಬಳ್ಳಿಯಲ್ಲಿ ಈ ನೈರುತ್ಯ ವಲಯವನ್ನು ಸ್ಥಾಪಿಸಲು ಮನವಿ ಬಂದಿದೆಯೇ ?

ಈ) ಕೇಂದ್ರದ ೧೯೯೪-೯೫ರ ರೈಲ್ವೆ ಅಂದಾಜು ಪತ್ರದಲ್ಲಿ ಇದರ ಪ್ರಸ್ತಾಪ ಇಲ್ಲದೇ ಇರುವುದರಿಂದ ರಾಜ್ಯ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ?